# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:29.12.2023

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂದತೆ ಅಮೃತಮೃತಂ :

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/210/2023–24/3601** **ದಿನಾಂಕ:09.01.2024**

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

**ವಿಷಯ : ದಿನಾಂಕ:29.12.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:29.12.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:29.12.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಡಾ. ವಿಷ್ಣುಮೂರ್ತಿ ಕೆ.ಎ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ : ಸದಸ್ಯರು
3. ಶ್ರೀಮತಿ ಶಾರದಾ ಪಾಟೀಲ, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ, ಡೀನರು, ಕಲಾ ನಿಕಾಯ : ಸದಸ್ಯರು
5. ಪ್ರೊ. ಮಹಾಬಲೇಶ್ವರ ಯು. ಎಸ್., ಪ್ರಾಧ್ಯಾಪಕರು : ಸದಸ್ಯರು
6. ಡಾ. ನಾಗರಾಜ ಎಸ್. ಹೆಚ್., ಪ್ರಾಚಾರ್ಯರು : ಸದಸ್ಯರು
7. ಡಾ. ಲಿಂಗರಾಜ ಪೂಜಾರ್., ಪ್ರಾಚಾರ್ಯರು : ಸದಸ್ಯರು
8. ಡಾ. ದಿವಾಕರ್ ನಾಯ್ಕ ಕೆ. ಎಸ್., ಪ್ರಾಚಾರ್ಯರು : ಸದಸ್ಯರು
9. ಶ್ರೀಮತಿ ಜಯಲಕ್ಷ್ಮಿ ಎಂ. ಆರ್., ಪ್ರಾಚಾರ್ಯರು : ಸದಸ್ಯರು
10. ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
11. ಶ್ರೀಮತಿ ಸರೋಜ ಬಿ.ಬಿ., ಕುಲಸಚಿವರು : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 8ಕ್ಕಿಂತ ಹೆಚ್ಚು ಅಂದರೆ 11 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(12/23) |

## –:ಟಿಪ್ಪಣಿ:–

ವಿಷಯ: ದಿನಾಂಕ:**29.12.2023** ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.

*****

ದಿನಾಂಕ:05.12.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:14.12.2023 ರಂದು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳ ಕುರಿತು ಇದುವರೆಗೂ ಯಾವುದೇ ಆಕ್ಷೇಪಣೆಗಳು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:29.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:05.12.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

1. ವಿಷಯ ಸಂಖ್ಯೆ:05(d)/(12/23) (ಪುಟಸಂಖ್ಯೆ:19) ಕ್ಕೆ ಸಂಬಂಧಪಟ್ಟಂತೆ "Digital Education System for Davangere University" ಎಂಬ "Digital Education System" ನ ಕುರಿತು ಪ್ರಸ್ತಾವನೆಯನ್ನು ಮಾತ್ರ ಸರ್ಕಾರಕ್ಕೆ ಸಲ್ಲಿಸಲು ಸಭೆಯು ನಿರ್ಣಯಿಸಿತು.
2. ಸದರಿ ನಡಾವಳಿಗಳ ವಿಷಯ ಸಂಖ್ಯೆ:02(f)/(12/23) (ಪುಟಸಂಖ್ಯೆ:33) ಕ್ಕೆ ಸಂಬಂಧಪಟ್ಟಂತೆ ಶ್ರೀ ಪ್ರತಾಪ್ ಎ.ವಿ. (ಹೊರಗುತ್ತಿಗೆ) ಇವರನ್ನು ವಿಶ್ವವಿದ್ಯಾನಿಲಯದ ಸಬಲೀಕರಣ ಅಧಿಕಾರಿ ಹುದ್ದೆಗೆ ನೇಮಕ ಮಾಡಿರುವುದನ್ನು ಹಿಂಪಡೆಯಲು ಸಭೆಯು ನಿರ್ಣಯಿಸಿತು.

ಮುಂದುವರೆದು, ಸುದೀರ್ಘ ಚರ್ಚೆಯ ನಂತರ ಸಭೆಯು ನಡಾವಳಿಗಳನ್ನು ಒಮ್ಮತದಿಂದ ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(a)/(12/23) |

## -: ಟಿಪ್ಪಣಿ :-

**ವಿಷಯ:** **ವಿಶ್ವವಿದ್ಯಾನಿಲಯದ ಯು.ಜಿ.ಸಿ-ಸಿಎಎಸ್ ನಿಯಮದಡಿ ಸಹಾಯಕ ಪ್ರಾಧ್ಯಾಪಕರ ವೃತ್ತಿ ಪದೋನ್ನತಿ(CAS) ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿಯ ಅರ್ಜಿಗಳನ್ನು ಯು.ಜಿ.ಸಿ-2018ರ ನಿಯಮಾವಳಿಯಂತೆ ಆಹ್ವಾನಿಸಿದ್ದು, ಅರ್ಜಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ನಡೆಸಿ ಎ.ಜಿ.ಪಿ ಮಂಜೂರಾತಿ ಮಾಡಲು ಬಾಹ್ಯ ವಿಷಯ ತಜ್ಞರುಗಳು ದಿನಾಂಕ:06.12.2023 ರಿಂದ 14.12.2023 ಮತ್ತು 27.12.2023 ರಂದು ಮೌಲ್ಯಮಾಪನ ಮತ್ತು ಸಂದರ್ಶನ ನಡೆಸಿ ವರದಿಯನ್ನು ನೀಡಿರುತ್ತಾರೆ.(ಅನುಬಂಧ-1).

ದಿನಾಂಕ:22.12.2023 ರಂದು ನಡೆದ ಸಭೆಯ ನಡಾವಳಿಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಯ Academic Level 10 ರಿಂದ Academic Level 11 ಕ್ಕೆ ವೃತ್ತಿ ಪದೋನ್ನತಿ ನೀಡಬಹುದೆಂದು ಅಭಿಪ್ರಾಯಿಸಿರುವುದನ್ನು ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**UGC CAS 2023 Scrutiny Completed Candidate Details (Level 10 to Level 11)**

| Sl No. | Date | Name | Department | Designation | Faculty |
|---|---|---|---|---|---|
| 1 | 06.12.2023 | Dr. Nagraj C | Library | Assistant Librarian | 2 |
| 2 | 06.12.2023 | Dr. Nelamma G | Library | Assistant Librarian | |
| 3 | 06.12.2023 | Dr. Prakash S R | Sociology | Assistant Professor | 2 |
| 4 | 06.12.2023 | Dr. Jyothi K | Sociology | Assistant Professor | |
| 5 | 06.12.2023 | Dr. Ravikumar S Kumbar | English | Assistant Professor | 1 |
| 6 | 07.12.2023 | Dr. Sreenivasa G | Zoology | Assistant Professor | 3 |
| 7 | 07.12.2023 | Dr. Renuka C Khaple | Zoology | Assistant Professor | |
| 8 | 07.12.2023 | Dr. Ambarisha Chabbi | Zoology | Assistant Professor | |
| 9 | 07.12.2023 | Pushpa B | Chemistry | Assistant Professor | 7 |
| 10 | 07.12.2023 | Dr. Shoukat Ali R A | Chemistry | Assistant Professor | |
| 11 | 07.12.2023 | Dr. Manjunatha D H | Chemistry | Assistant Professor | |
| 12 | 07.12.2023 | Dr. Rajendra Prasad S | Chemistry | Assistant Professor | |
| 13 | 07.12.2023 | Dr. Chidananda B | Chemistry | Assistant Professor | |
| 14 | 07.12.2023 | Dr. Mahanthesha K R | Chemistry | Assistant Professor | |
| 15 | 07.12.2023 | Dr. Keerthi Kumar C T | Chemistry | Assistant Professor | |
| 16 | 07.12.2023 | Dr. Vinay M | Journalism and Mass Communication | Assistant Professor | 1 |
| 17 | 08.12.2023 | Dr. Ashwini Y | Mathematics | Assistant Professor | 4 |
| 18 | 08.12.2023 | Dr. Chetana Gali | Mathematics | Assistant Professor | |
| 19 | 08.12.2023 | Dr. Mahesh Barki | Mathematics | Assistant Professor | |
| 20 | 08.12.2023 | Dr. Raghunath K R | Mathematics | Assistant Professor | |
| 21 | 08.12.2023 | Dr. Shivaveerakumar S | Microbiology | Assistant Professor | 1 |
| 22 | 08.12.2023 | Dr. Prabhurajeshwar | Biotechnology | Assistant Professor | 4 |
| 23 | 08.12.2023 | Dr. Navya H M | Biotechnology | Assistant Professor | |
| 24 | 08.12.2023 | Dr. Chandrashekhar S | Biotechnology | Assistant Professor | |
| 25 | 08.12.2023 | Dr. Kavitha G C | Biotechnology | Assistant Professor | |
| 26 | 08.12.2023 | Dr. Thippesh K | MSW | Assistant Professor | 2 |
| 27 | 08.12.2023 | Dr. Patawardhan Rathod | MSW | Assistant Professor | |
| 28 | 08.12.2023 | Dr. Shashidhara D | Commerce | Assistant Professor | 5 |
| 29 | 08.12.2023 | Dr. Kumara M R | Commerce | Assistant Professor | |
| 30 | 08.12.2023 | Dr. Sathisha R K | Commerce | Assistant Professor | |
| 31 | 08.12.2023 | Dr. Rashmi M | Commerce | Assistant Professor | |
| 32 | 08.12.2023 | Dr. Sharanraj | Commerce | Assistant Professor | |

ಮುಂದುವರೆದಿದೆ.

ಕುಲಸಚಿವರು

ಕುಲಪತಿಗಳು

| | | | | | |
|---|---|---|---|---|---|
| 33 | 13.12.2023 | Dr. Prasanna G D | Physics | Assistant Professor | 6 |
| 34 | 13.12.2023 | Dr. Gowtham G K | Physics | Assistant Professor | |
| 35 | 13.12.2023 | Dr. Shashikala B Yalagi | Physics | Assistant Professor | |
| 36 | 13.12.2023 | Dr. Amith Yadav | Physics | Assistant Professor | |
| 37 | 13.12.2023 | Dr. Ashwajeet J S | Physics | Assistant Professor | |
| 38 | 13.12.2023 | Dr. Soumya S Bulla | Physics | Assistant Professor | |
| 39 | 13.12.2023 | Dr. Santhosh Kumar M | Biochemistry | Assistant Professor | 1 |
| 40 | 13.12.2023 | Dr. Poornima D V | Food Technology | Assistant Professor | 7 |
| 41 | 13.12.2023 | Dr. Sadashiv S O | Food Technology | Assistant Professor | |
| 42 | 13.12.2023 | Dr. Venkatesh | Food Technology | Assistant Professor | |
| 43 | 13.12.2023 | Dr. Gayathri Vaidya | Food Technology | Assistant Professor | |
| 44 | 13.12.2023 | Dr. Veeresh S J | Food Technology | Assistant Professor | |
| 45 | 13.12.2023 | Dr. Santhosh Kumar S R | Food Technology | Assistant Professor | |
| 46 | 13.12.2023 | Dr. Sharadadevi Kallimani | Food Technology | Assistant Professor | |
| 47 | 13.12.2023 | Dr. Asifulla A | MBA | Assistant Professor | 4 |
| 48 | 13.12.2023 | Dr. Ramesh Chandrahasa | MBA | Assistant Professor | |
| 49 | 13.12.2023 | Dr. Sunitha R | MBA | Assistant Professor | |
| 50 | 13.12.2023 | Dr. Bommanavar Santosh | MBA | Assistant Professor | |
| 51 | 13.12.2023 | Dr. Manasa D J | Botany | Assistant Professor | 4 |
| 52 | 13.12.2023 | Dr. Siddappa B K | Botany | Assistant Professor | |
| 53 | 13.12.2023 | Dr. Thippeswamy M | Botany | Assistant Professor | |
| 54 | 13.12.2023 | Dr. Haleshi C | Botany | Assistant Professor | |
| 55 | 13.12.2023 | Dr. Kumar Siddamallappa U | Computer Science | Assistant Professor | 2 |
| 56 | 13.12.2023 | Dr. Dhanesha R | Computer Science | Assistant Professor | |
| 57 | 13.12.2023 | Dr. Nagaraju N | Political Science | Assistant Professor | 5 |
| 58 | 13.12.2023 | Dr. Praveena T L | Political Science | Assistant Professor | |
| 59 | 13.12.2023 | Dr. Basavaraj Benakanahalli | Political Science | Assistant Professor | |
| 60 | 13.12.2023 | Dr. Shreedhar Barki | Political Science | Assistant Professor | |
| 61 | 13.12.2023 | Dr. Swamy H | Political Science | Assistant Professor | |
| 62 | 13.12.2023 | Dr. P Nagabhushanagoud | History | Assistant Professor | 3 |
| 63 | 13.12.2023 | Dr. Ambika Devi | History | Assistant Professor | |
| 64 | 13.12.2023 | Dr. Honnuraswamy H | History | Assistant Professor | |
| 65 | 14.12.2023 | Dr. Bheemashankar Joshi | Kannada | Assistant Professor | 5 |
| 66 | 14.12.2023 | Dr. Basavaraja B | Kannada | Assistant Professor | |
| 67 | 14.12.2023 | Dr. Shantharaju H V | Kannada | Assistant Professor | |
| 68 | 14.12.2023 | Dr. Mahantesh Patil | kannada | Assistant Professor | |
| 69 | 14.12.2023 | Dr. Vijaykumar H G | Kannada | Assistant Professor | |
| 70 | 14.12.2023 | Dr. Rangaswamy C | Education | Assistant Professor | 1 |
| 71 | 27.12.2023 | Dr. Jayraj M Chickpatil | Visual Arts | Assistant Professor | 2 |
| 72 | 27.12.2023 | Dr. Satishkumar P Wallepure | Visual Arts (Painting) | Assistant Professor | |

## ನಿರ್ಣಯ

ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿಯ ಅರ್ಜಿಗಳನ್ನು ಯು.ಜಿ.ಸಿ–2018ರ ನಿಯಮಾವಳಿಗಳು ಮತ್ತು ಘನತೆವೆತ್ತ ಮಾನ್ಯ ರಾಜ್ಯಪಾಲರಿಂದ ಅನುಮೋದನೆಗೊಂಡ ವಿಶ್ವವಿದ್ಯಾನಿಲಯದ ಪರಿನಿಯಮಗಳನುಸಾರ ಸಿ.ಎ.ಎಸ್. ನಿಯಮದಡಿ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರ ಅರ್ಜಿಗಳನ್ನು ಪರಿಶೀಲನೆ ಮತ್ತು ಮೌಲ್ಯಮಾಪನ ಮಾಡಲು ವಿವಿಧ ವಿಶ್ವವಿದ್ಯಾನಿಲಯಗಳ ಬಾಹ್ಯ ವಿಷಯ ತಜ್ಞರುಗಳು ಮೌಲ್ಯಮಾಪನ ಮತ್ತು ಸಂದರ್ಶನ ನಡೆಸಿದ ವರದಿಯನ್ನು ಸಭೆಯು ಸುಧೀರ್ಘವಾಗಿ ಚರ್ಚಿಸಿ ಒಮ್ಮತದಿಂದ ಅನುಮೋದಿಸಿತು ಹಾಗೂ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(a)/(12/23) |

# -: ಟಿಪ್ಪಣಿ :-

**ವಿಷಯ:** ವಿಶ್ವವಿದ್ಯಾನಿಲಯದ ಕಾನೂನು ಕೋಶಕ್ಕೆ ಕಾನೂನು ಸಲಹೆಗಾರರನ್ನು ನೇಮಿಸುವ ಬಗ್ಗೆ.

ಉಲ್ಲೇಖ : ವಿಶ್ವವಿದ್ಯಾನಿಲಯದ ಪತ್ರಸಂಖ್ಯೆ:ದಾವಿವಿ:ಮಾಸನಿ:282/2023-24/2931 ದಿನಾಂಕ:09.11.2023.

*********

ದಿನಾಂಕ:07.10.2023 ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ವಿಶ್ವವಿದ್ಯಾನಿಲಯದ ಕಾನೂನು ಕೋಶಕ್ಕೆ ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳಲು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಣೆ ನೀಡಿ ಸ್ವವಿವರಗಳನ್ನು ದಿನಾಂಕ:24.11.2023 ರೊಳಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ, **ಯಾವುದೇ ಸ್ವವಿವರಗಳನ್ನೊಳಗೊಂಡ ಅರ್ಜಿಗಳು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗದೇ ಇರುವುದರಿಂದ** ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ ಸದರಿ ಹುದ್ದೆಯನ್ನು ನೇಮಕ ಮಾಡಿಕೊಳ್ಳಲು ದಿನಾಂಕ:05.12.2023 ರ ಸಿಂಡಿಕೇಟ್ ಸಭೆಯು ಒಮ್ಮತದಿಂದ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತ್ತು.

ಮುಂದುವರೆದು, ಶ್ರೀ ಐ.ಎಸ್. ಜಂತ್ಲಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ದಾವಣಗೆರೆ ಇವರು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಹುದ್ದೆಗೆ ಮನವಿ ಸಲ್ಲಿಸಿರುವುದರಿಂದ ಸದರಿ ವಿಷಯವನ್ನು ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಕಾನೂನು ಘಟಕದ ಕಾನೂನು ಸಲಹೆಗಾರರ ಹುದ್ದೆಗೆ ಶ್ರೀ ಐ.ಎಸ್. ಜಂತ್ಲಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ದಾವಣಗೆರೆ ಇವರು ಸಲ್ಲಿಸಿರುವ ಮನವಿಯನ್ನು ಸಭೆಯು ಪರಿಶೀಲಿಸಿ ಸದರಿಯವರನ್ನು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಹುದ್ದೆಗೆ ಮಾಸಿಕ ವೇತನ ರೂ.35,000/-ಗಳಂತೆ ನಿಗದಿಪಡಿಸಿ 01 ವರ್ಷದ ಅವಧಿಗೆ ನೇಮಕ ಮಾಡಿಕೊಳ್ಳಲು ಸಭೆಯು ನಿರ್ಣಯಿಸಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(b)/(12/23) |

# -: ಟಿಪ್ಪಣಿ :-

**ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ.**

*********

ದಾವಣಗೆರೆ ವಿಶ್ವವಿದ್ಯಾನಿಲಯದ ಕೆಲವು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧಕ್ಷರು/ ಸಂಯೋಜನಾಧಿಕಾರಿಗಳ ನೇಮಕಾತಿಯು ಜನವರಿ-2024 ಮಾಹೆಯಲ್ಲಿ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸದರಿ ವಿಭಾಗದ ಅಧ್ಯಾಪಕರುಗಳ ಜೇಷ್ಠತೆ ಮೇರೆಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ (ಪರಿಸರ ವಿಜ್ಞಾನ ಸಂಯೋಜನಾಧಿಕಾರಿಯನ್ನು ಬದಲಾವಣೆ ಕುರಿತು) ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ.ಸಂ. | ವಿಭಾಗ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷರು/ಸಂಯೋಜನಾಧಿಕಾರಿಗಳು | ಅವಧಿ |
|---|---|---|---|
| 01 | ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ | ಡಾ. ಸತ್ಯನಾರಾಯಣ, ಸಹ ಪ್ರಾಧ್ಯಾಪಕರು | 18.01.2022 ರಿಂದ 17.01.2024 |
| 02 | ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ (ಎಂ.ಬಿ.ಎ.) | ಡಾ. ಜೆ.ಕೆ. ರಾಜು, ಪ್ರಾಧ್ಯಾಪಕರು | 18.01.2022 ರಿಂದ 17.01.2024 |
| 03 | ಕನ್ನಡ ಅಧ್ಯಯನ ವಿಭಾಗ | ಡಾ. ಜೋಗಿನಕಟ್ಟೆ ಮಂಜುನಾಥ, ಸಹ ಪ್ರಾಧ್ಯಾಪಕರು | 18.01.2022 ರಿಂದ 17.01.2024 |
| 04 | ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ | ಡಾ. ವಿರುಪಾಕ್ಷಯ್ಯ ಡಿ.ಬಿ.ಎಂ, ಪ್ರಾಧ್ಯಾಪಕರು | 18.01.2022 ರಿಂದ 17.01.2024 |
| 05 | ಭೌತಶಾಸ್ತ್ರ ಅಧ್ಯಯನ ವಿಭಾಗ | ಡಾ. ಕೆ.ಎಂ. ಈಶ್ವರಪ್ಪ, ಸಹ ಪ್ರಾಧ್ಯಾಪಕರು | 18.01.2022 ರಿಂದ 17.01.2024 |
| 06 | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ | ಡಾ. ಸೀಮಾ ಜೆ. ಪಟೇಲ್, ಸಹ ಪ್ರಾಧ್ಯಾಪಕರು | 18.01.2022 ರಿಂದ 17.01.2024 |
| 07 | ಗಣಕಯಂತ್ರ ಅಧ್ಯಯನ ವಿಭಾಗ | ಡಾ. ಚಂದ್ರಕಾಂತ್ ನಾಯ್ಕೋಡಿ, ಸಹ ಪ್ರಾಧ್ಯಾಪಕರು | 18.01.2022 ರಿಂದ 17.01.2024 |
| 08 | ವಿಶ್ವವಿದ್ಯಾನಿಲಯದ ಘಟಕ ಕಾಲೇಜು, ತುರುವನೂರು | ಡಾ. ರೂಪೇಶ್ ಕುಮಾರ್, ಸಹಾಯಕ ಪ್ರಾಧ್ಯಾಪಕರು | 17.11.2021 ರಿಂದ 16.11.2023 |
| 09 | ಯೋಗ ವಿಜ್ಞಾನ | ಡಾ. ಶಿವವೀರಕುಮಾರ್ ಎಸ್, ಸಹಾಯಕ ಪ್ರಾಧ್ಯಾಪಕರು | 07.04.2021 ರಿಂದ 06.04.2023 |

ಮುಂದುವರೆದಿದೆ..

ಕುಲಸಚಿವರು ಕುಲಪತಿಗಳು

## ನಿರ್ಣಯ

ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ನೇಮಕ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

| ಕ್ರ.ಸಂ. | ವಿಭಾಗ | ಹೆಸರು | ಹುದ್ದೆ | ಅವಧಿ |
|---|---|---|---|---|
| 01 | ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ | ಡಾ. ಸುಪ್ರಿಯ ಆರ್<br>ಸಹ ಪ್ರಾಧ್ಯಾಪಕರು | ಅಧ್ಯಕ್ಷರು | 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ |
| 02 | ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ (ಎಂ.ಬಿ.ಎ.) | ಡಾ. ಶಶಿಧರ್ ಆರ್<br>ಪ್ರಾಧ್ಯಾಪಕರು | ಅಧ್ಯಕ್ಷರು | |
| 03 | ಕನ್ನಡ ಅಧ್ಯಯನ ವಿಭಾಗ | ಡಾ. ಜಯರಾಮಯ್ಯ ವಿ<br>ಸಹ ಪ್ರಾಧ್ಯಾಪಕರು | ಅಧ್ಯಕ್ಷರು | |
| 04 | ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ | ಡಾ. ಶಿಶುಪಾಲ ಎಸ್<br>ಪ್ರಾಧ್ಯಾಪಕರು | ಅಧ್ಯಕ್ಷರು | |
| 05 | ಭೌತಶಾಸ್ತ್ರ ಅಧ್ಯಯನ ವಿಭಾಗ | ಡಾ. ಮುತ್ತನಗೌಡ ಕಳಸದ<br>ಪ್ರಾಧ್ಯಾಪಕರು | ಅಧ್ಯಕ್ಷರು | |
| 06 | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ | ಡಾ. ನಿರಂಜನ ಎಂ.ಹೆಚ್<br>ಸಹ ಪ್ರಾಧ್ಯಾಪಕರು | ಅಧ್ಯಕ್ಷರು | |
| 07 | ಪರಿಸರ ವಿಜ್ಞಾನ ಅಧ್ಯಯನ ವಿಭಾಗ | ಡಾ. ಪ್ರಮೋದ್ ಎಸ್.ಎನ್<br>ಸಹ ಪ್ರಾಧ್ಯಾಪಕರು | ಸಂಯೋಜನಾಧಿಕಾರಿ | |
| 08 | ಗಣಕಯಂತ್ರ ಅಧ್ಯಯನ ವಿಭಾಗ | ಡಾ. ಚಂದ್ರಕಾಂತ್ ನಾಯ್ಕೊಡಿ<br>ಸಹ ಪ್ರಾಧ್ಯಾಪಕರು | ಅಧ್ಯಕ್ಷರು | ಡಾ. ಬಸವಣ್ಣ ಎಂ. ಸಹ ಪ್ರಾಧ್ಯಾಪಕರು, ಇವರು ಎಂ.ಸಿ.ಎ. ವಿಭಾಗಕ್ಕೆ ಅಧ್ಯಕ್ಷರಾಗಿರುವುದರಿಂದ ಡಾ. ಚಂದ್ರಕಾಂತ್ ನಾಯ್ಕೊಡಿ ಇವರನ್ನು 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲಾಗಿದೆ. |
| 09 | ವಿಶ್ವವಿದ್ಯಾನಿಲಯದ ಘಟಕ ಕಾಲೇಜು, ತುರುವನೂರು | ಡಾ. ರೂಪೇಶ್ ಕುಮಾರ್,<br>ಸಹಾಯಕ ಪ್ರಾಧ್ಯಾಪಕರು | ಸಂಯೋಜನಾಧಿಕಾರಿ | 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ |
| 10 | ಯೋಗ ವಿಜ್ಞಾನ | ಡಾ. ಶಿವವೀರಕುಮಾರ್ ಎಸ್,<br>ಸಹಾಯಕ ಪ್ರಾಧ್ಯಾಪಕರು | ಸಂಯೋಜನಾಧಿಕಾರಿ | |

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(c)/(12/23) |

## –: ಟಿಪ್ಪಣಿ :–

ವಿಷಯಃ ಶ್ರೀಮತಿ ನಿವೇದಿತಾ ಬಿ.ಟಿ., ಸಹಾಯಕ ಪ್ರಾಧ್ಯಾಪಕರು – ಇವರ ಪತಿಯವರಾದ ಶ್ರೀ ಮೋಹನ್ ಕುಮಾರ್ ಜಿ.ಹೆಚ್., ಇವರ ವೈದ್ಯಕೀಯ ವೆಚ್ಚ ಮರುಭರಿಕೆ ಮಾಡುವ ಕುರಿತು.

*********

ಶ್ರೀಮತಿ ನಿವೇದಿತಾ ಬಿ.ಟಿ., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ – ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಪತಿಯವರಾದ ಶ್ರೀ ಮೋಹನ್ ಕುಮಾರ್, ಜಿ.ಹೆಚ್., ಇವರಿಗೆ ಅನಾರೋಗ್ಯದ ಕಾರಣದಿಂದಾಗಿ ವೈದ್ಯಕೀಯ ವೆಚ್ಚ ರೂ.1,36,178–00 ಗಳನ್ನು ಮರುಭರಿಕೆ ಮಾಡುವಂತೆ ಕೋರಿರುತ್ತಾರೆ. ಈ ಕುರಿತು ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ಶ್ರೀಮತಿ ನಿವೇದಿತಾ ಬಿ.ಟಿ., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ – ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಪತಿಯವರಾದ ಶ್ರೀ ಮೋಹನ್ ಕುಮಾರ್, ಜಿ.ಹೆಚ್., ಇವರು ಅಪೋಲೋ ಹಾಸ್ಪಿಟಲ್, ಬೆಂಗಳೂರು ಇಲ್ಲಿ ಅನಾರೋಗ್ಯದ ಕಾರಣದಿಂದಾಗಿ ಚಿಕಿತ್ಸೆ ಪಡೆದ ವೈದ್ಯಕೀಯ ವೆಚ್ಚದ ಒಟ್ಟು ಬಾಬ್ತು ರೂ.1,36,178–00 ಗಳನ್ನು ಮರುಭರಿಕೆ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(a)/(12/23) |

# -: ಟಿಪ್ಪಣಿ :-

**ವಿಷಯಃ ವಿಶ್ವವಿದ್ಯಾನಿಲಯದ 2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿಗೆ ಅನುಮೋದನೆ ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ 2023-24ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು - ವಿವಿಧ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು/ಅಧ್ಯಾಪಕರುಗಳು - ಅತಿಥಿ ಉಪನ್ಯಾಸಕರುಗಳಿಗೆ ಅನುಕೂಲವಾಗುವಂತೆ ಹಾಗೂ ಪ್ರಸಕ್ತ ಸಾಲಿನ ವಿದ್ಯಾರ್ಥಿಗಳಿಗೆ ನಿಗದಿತ ಸಮಯದಲ್ಲಿ ಪಠ್ಯಕ್ರಮವನ್ನು ಬೋಧಿಸಲು ನೆರವಾಗುವಂತೆ ಸದರಿ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದ್ದು, ಪ್ರಾಂಶುಪಾಲರ ಸಭೆಯ ನಿರ್ಣಯಾನುಸಾರ ಹಾಗೂ ಮಾನ್ಯ ಕುಲಪತಿಗಳ ಆದೇಶಾನುಸಾರ, 2023-24ನೇ ಶೈಕ್ಷಣಿಕ ಸಾಲಿನ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಸಿದ್ದಪಡಿಸಲಾಗಿದೆ.

**:2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ತರಗತಿಗಳ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿ:**

| ಕ್ರ.ಸಂ. | ಶೈಕ್ಷಣಿಕ ಕಾರ್ಯಕ್ರಮಗಳು | ದಿನಾಂಕ |
|---|---|---|
| 1 | 1ನೇ ಸೆಮಿಸ್ಟರ್ ತರಗತಿಗಳ ಪ್ರವೇಶಾತಿ ಪ್ರಕ್ರಿಯೆ | 22.05.2023 ರಿಂದ 24.08.2023 |
| 2 | 1ನೇ, 3ನೇ ಮತ್ತು 5ನೇ ಸೆಮಿಸ್ಟರ್ ತರಗತಿಗಳ ಪ್ರಾರಂಭ | 28.08.2023 |
| 3 | 1ನೇ, 3ನೇ ಮತ್ತು 5ನೇ ಸೆಮಿಸ್ಟರ್ ನೇ ಸೆಮಿಸ್ಟರ್ ತರಗತಿಗಳ ಮುಕ್ತಾಯ | 15.01.2024 |
| 4 | ಬೆಸ ಸೆಮಿಸ್ಟರ್ (1ನೇ, 3ನೇ ಹಾಗೂ 5ನೇ) ತರಗತಿಗಳ ಪರೀಕ್ಷೆ, ಮೌಲ್ಯಮಾಪನ, ಫಲಿತಾಂಶ ಹಾಗೂ ರಜಾವಧಿ. | 16.01.2024 ರಿಂದ 17.02.2024 |
| 5 | ಸಮ (2ನೇ, 4ನೇ ಮತ್ತು 6ನೇ) ಸೆಮಿಸ್ಟರ್‌ಗಳ ತರಗತಿಗಳ ಪ್ರಾರಂಭ | 19.02.2024 |
| 6 | ಸಮ (2ನೇ, 4ನೇ ಮತ್ತು 6ನೇ) ಸೆಮಿಸ್ಟರ್ ತರಗತಿಗಳ ಮುಕ್ತಾಯ | 18.06.2024 |
| 7 | ಸಮ ಸೆಮಿಸ್ಟರ್ (2ನೇ, 4ನೇ ಹಾಗೂ 6ನೇ) ತರಗತಿಗಳ ಪರೀಕ್ಷೆ, ಮೌಲ್ಯಮಾಪನ, ಫಲಿತಾಂಶ ಹಾಗೂ ರಜಾವಧಿ<br>2023-24ನೇ ಶೈಕ್ಷಣಿಕ ಸಾಲಿನ ಸಮ ಸೆಮಿಸ್ಟರ್‌ಗಳ ಅವಧಿ ಮುಕ್ತಾಯ. | 19.06.2024 ರಿಂದ 20.07.2024 |

ಈ ಕುರಿತು ಸದರಿ ವಿಷಯವನ್ನು ದಿನಾಂಕ:29.12.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ 2023-24ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಕಾಲೇಜುಗಳ ಪ್ರಾಂಶುಪಾಲರುಗಳು/ ಅಧ್ಯಾಪಕರುಗಳು - ಅತಿಥಿ ಉಪನ್ಯಾಸಕರುಗಳಿಗೆ ಅನುಕೂಲವಾಗುವಂತೆ ಹಾಗೂ ಪ್ರಸಕ್ತ ಸಾಲಿನ ವಿದ್ಯಾರ್ಥಿಗಳಿಗೆ ನಿಗದಿತ ಸಮಯದಲ್ಲಿ ಪಠ್ಯಕ್ರಮವನ್ನು ಬೋಧಿಸಲು ನೆರವಾಗುವಂತೆ ತಾತ್ಕಾಲಿಕ ವೇಳಾಪಟ್ಟಿಯನ್ನು ಪರಿಷ್ಕರಣೆ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(b)/(12/23) |

# -: ಟಿಪ್ಪಣಿ :-

**ವಿಷಯ:** **2023-24ನೇ ಸಾಲಿನ ಸ್ನಾತಕ ಬಿ.ಇಡಿ., ಪದವಿಯ ಪ್ರವೇಶ ಶುಲ್ಕ ನಿಗದಿಪಡಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಸಂಖ್ಯೆ:ದಾವಿವಿ:ಶೈ:184:2023-24/3457 ದಿನಾಂಕ:27.12.2023

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಬಿ.ಇಡಿ. ಪದವಿಯ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿನಲ್ಲಿ ನಿಗದಿಗೊಳಿಸಿದ ಶುಲ್ಕವನ್ನೇ 2023-24ನೇ ಶೈಕ್ಷಣಿಕ ಸಾಲಿಗೂ ಮುಂದುವರೆಸುವಂತೆ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ 2023-24ನೇ ಸಾಲಿನ ಶುಲ್ಕ ತಃಖ್ತೆಯನ್ನು ಈ ಕೆಳಗಿನಂತೆ ಸಿದ್ದಪಡಿಸಲಾಗಿದ್ದು, ಸದರಿ ಶುಲ್ಕದ ವಿವರಗಳನ್ನು ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರುಗಳ ಗಮನಕ್ಕೆ ತರಲು ಉಲ್ಲೇಖಿತ ಪತ್ರದನುಸಾರ ಅಧಿಸೂಚಿಸಲಾಗಿದೆ.

**:2023-24ನೇ ಸಾಲಿನ ಬಿ.ಇಡಿ. ಶುಲ್ಕದ ವಿವರ:**

| Sl. No. | Particulars | Fees Details | |
|---|---|---|---|
| | | I[st] Year (Semester) | 2[nd] Year (Semester) |
| 01 | Admission Fee (University) | 1077 | 1077 |
| 02 | Registration | 2299 | - |
| 03 | University Development Fund | 1694 | 1694 |
| 04 | Sports Development Fund | 484 | 484 |
| 05 | ECA | 484 | 484 |
| 06 | Career Guidance Fund | 55 | 55 |
| 07 | Rovers & Rangers (Scouts & Guides) | 42 | 42 |
| 08 | Poor Student Fund | 36 | 36 |
| 09 | Zymkhana Fee | 500 | 500 |
| | **TOTAL** | **6671** | **4372** |

| | | |
|---|---|---|
| 01 | Other University Fees | **786** |
| 02 | Out of University Fees | **3073** |

**NOTE (1):** The following fees to be collected by the concerned Colleges & shall be utilized for the purpose for which it is collected.

| Sl. No. | Particulars | Total |
|---|---|---|
| 1 | Sport Development Fee | 78 |
| 2 | ECA | 78 |
| 3 | Red Cross | 78 |
| 4 | Skill Development | 151 |
| | **TOTAL** | **385** |

**NOTE (2):**
1. The CONVOCATION FEES will be collected in Examination Branch as prescribed by the University.
2. The Registration Fee for ADD-ON Courses offered by the Colleges fees shall be collected Rs.334/-

ಸದರಿ 2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಬಿ.ಇಡಿ. ಪದವಿಯ ಪ್ರವೇಶ ಶುಲ್ಕ ತಃಖ್ತೆಯನ್ನು ದಿನಾಂಕ:29.12.2023ರಂದು ನಡೆಯಲಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಬಿ.ಇಡಿ. ಪದವಿಯ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿನಲ್ಲಿ ನಿಗದಿಗೊಳಿಸಿದ ಶುಲ್ಕವನ್ನೇ 2023-24ನೇ ಶೈಕ್ಷಣಿಕ ಸಾಲಿಗೆ ಮುಂದುವರೆಸಲು ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(a)/(12/23) |

## -: ಟಿಪ್ಪಣಿ :-

**ವಿಷಯಃ ವಿಶ್ವವಿದ್ಯಾನಿಲಯದ ವಿವಿಧ ನೈಜತೆ ಪ್ರಮಾಣ ಪತ್ರಗಳ ಶುಲ್ಕವನ್ನು ಪರಿಷ್ಕರಿಸುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:22.12.2023

*********

ವಿಶ್ವವಿದ್ಯಾನಿಲಯದ ವಿವಿಧ ಪದವಿಗಳ ನೈಜತೆ ಪ್ರಮಾಣ ಪತ್ರಗಳ ಶುಲ್ಕವು ಇತರೆ ವಿಶ್ವವಿದ್ಯಾನಿಲಯಗಳ ಶುಲ್ಕಗಳಿಗಿಂತ ಕಡಿಮೆ ಇರುವುದರಿಂದ ನೈಜತೆ ಪ್ರಮಾಣ ಪತ್ರಗಳ ಶುಲ್ಕವನ್ನು ಒಂದು ಪದವಿಗೆ ರೂ.1,610/- ಗಳಂತೆ ಪರಿಷ್ಕರಿಸಲು ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### <u>ನಿರ್ಣಯ</u>

ವಿಶ್ವವಿದ್ಯಾನಿಲಯದ ವಿವಿಧ ಪದವಿಗಳ ನೈಜತೆ ಪ್ರಮಾಣ ಪತ್ರಗಳ ಶುಲ್ಕವನ್ನು ರೂ.1,610/- ಗಳಂತೆ ಪರಿಷ್ಕರಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.05(b)/(12/23) |

## -: ಟಿಪ್ಪಣಿ :-

ವಿಷಯಃ ಸ್ನಾತಕ ಮತ್ತು ಬಿ.ಇಡಿ "ದ್ವಿಗುಣ ಅವಧಿ" ಪೂರೈಸಿರುವ ವಿದ್ಯಾರ್ಥಿಗಳಿಗೆ ಜನವರಿ-2024ರ ಮಾಹೆಯಲ್ಲಿ ಪರೀಕ್ಷೆ ಬರೆಯಲು ಅನುಮತಿ ನೀಡಿರುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:22.12.2023

*********

ಸ್ನಾತಕ ಪದವಿಯ 2012-13ನೇ ಹಾಗೂ 2016-17ನೇ ಪಠ್ಯಕ್ರಮದ ದ್ವಿಗುಣ ಅವಧಿ ಪೂರೈಸಿರುವ ವಿದ್ಯಾರ್ಥಿಗಳಿಗೆ ಮತ್ತು ಬಿ.ಇಡಿ ಪದವಿಯ 'ದ್ವಿಗುಣ ಅವಧಿ' ಪೂರೈಸಿರುವ ವಿದ್ಯಾರ್ಥಿಗಳಿಗೆ ಜನವರಿ-2024ರ ಮಾಹೆಯಲ್ಲಿ ಜರುಗಲಿರುವ ಪರೀಕ್ಷೆಗಳಲ್ಲಿ ಪರೀಕ್ಷೆ ಬರೆಯಲು ಅನುಮತಿ ನೀಡಿಲಾಗಿದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

### <u>ನಿರ್ಣಯ</u>

ಸ್ನಾತಕ ಪದವಿಯ 2012-13ನೇ ಹಾಗೂ 2016-17ನೇ ಪಠ್ಯಕ್ರಮದ ದ್ವಿಗುಣ ಅವಧಿ ಪೂರೈಸಿರುವ ವಿದ್ಯಾರ್ಥಿಗಳಿಗೆ ಹಾಗೂ ಬಿ.ಇಡಿ ಪದವಿಯ 'ದ್ವಿಗುಣ ಅವಧಿ' ಪೂರೈಸಿರುವ ವಿದ್ಯಾರ್ಥಿಗಳಿಗೆ ಜನವರಿ-2024ರ ಮಾಹೆಯಲ್ಲಿ ಜರುಗಲಿರುವ ಪರೀಕ್ಷೆಗಳಲ್ಲಿ ಪರೀಕ್ಷೆ ಬರೆಯಲು ಅನುಮತಿ ನೀಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(c)/(12/23) |

# -: ಟಿಪ್ಪಣಿ :-

**ವಿಷಯ:** ಸ್ನಾತಕ ಹಾಗೂ ಬಿ.ಇಡಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪರಿಷ್ಕರಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:22.12.2023

*********

M/S;Logisys, Bangalore ಪರೀಕ್ಷಾ ತಂತ್ರಾಂಶದವರಿಗೆ ಪರಿಷ್ಕೃತ ದರದೊಂದಿಗೆ ಒಂದು ವರ್ಷದ ಅವಧಿಗೆ ಒಪ್ಪಂದ ವಿಸ್ತರಿಸಿರುವ ಹಿನ್ನಲೆಯಲ್ಲಿ ಸದರಿ ದರವು ವಿಶ್ವವಿದ್ಯಾನಿಲಯದ ಮೇಲೆ ಆರ್ಥಿಕ ಹೊರೆಯಾಗುವುದರಿಂದ ಸ್ನಾತಕ ಮತ್ತು ಬಿ.ಇಡಿ ಪದವಿಗಳ ಪರೀಕ್ಷಾ ಶುಲ್ಕದಲ್ಲಿ ಅಲ್ಪ ಪ್ರಮಾಣದಲ್ಲಿ ಪರಿಷ್ಕರಿಸಿ ಪ್ರಕಟಣೆಯನ್ನು ಹೊರಡಿಸಿರುವುದರಿಂದ ಸದರಿ ಪರೀಕ್ಷಾ ಶುಲ್ಕವನ್ನು ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

## ಶುಲ್ಕದ ವಿವರ

**ಬಿ.ಇಡಿ. ಅಥವಾ ಸ್ನಾತಕ ಪದವಿಯ ದ್ವಿಗುಣ ಅವಧಿ ಮುಗಿಸಿದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಪಟ್ಟಿ-ಜನವರಿ-2024**

**ಬಿ.ಇಡಿ. ಸೆಮಿಸ್ಟರ್ ಸ್ಕೀಂ**

| ಕ್ರ.ಸಂ. | ವಿವರ | ಹಳೆಯ ಶುಲ್ಕದ ವಿವರ | ಪರಿಷ್ಕರಿಸಲಾದ ಶುಲ್ಕದ ವಿವರ |
|---|---|---|---|
| 1 | ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | ರೂ.100/- | ರೂ.200/- |
| 2 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ.960/- | ರೂ. 1,100/- |
| | | ಅಂಕಪಟ್ಟಿ ಶುಲ್ಕ ರೂ.220/- | ರೂ. 250/- |
| | | **ಒಟ್ಟು ಶುಲ್ಕ ರೂ.1280/-** | **ರೂ. 1,550/-** |
| 3 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ (ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ) | ರೂ. 200/- | ರೂ. 400/- |
| 4 | ಪ್ರಯೋಗಿಕ ಪರೀಕ್ಷೆಗೆ ಒಂದು ವಿಷಯಕ್ಕೆ (ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ) | ರೂ. 300/- | ರೂ. 500 |
| 5 | ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | ರೂ. 220/- | ರೂ. 250/- |

**ಬಿ.ಎ (BA)**

| ಕ್ರ.ಸಂ. | ವಿವರ | ಹಳೆಯ ಶುಲ್ಕದ ವಿವರ | ಪರಿಷ್ಕರಿಸಲಾದ ಶುಲ್ಕದ ವಿವರ |
|---|---|---|---|
| 1 | ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | ರೂ.100/- | ರೂ.200/- |
| 2 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ.565/- | ರೂ.800/- |
| | | ಅಂಕಪಟ್ಟಿ ಶುಲ್ಕ ರೂ.185/- | ರೂ.200/- |
| | | **ಒಟ್ಟು ಶುಲ್ಕ ರೂ.750/-** | **ರೂ.1,000/-** |
| 3 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ | ರೂ.170/- | ರೂ.300/- |
| 4 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ (ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ) | ರೂ.130/- | ರೂ.250/- |
| 5 | ರಿಪಿಟರ್ಸ್ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ | ರೂ.100/- | ರೂ.150/- |

ಮುಂದುವರೆದಿದೆ..

ಕುಲಸಚಿವರು

ಕುಲಪತಿಗಳು

ಬಿ.ಎಸ್ಸಿ (B.SC)

| ಕ್ರ.ಸಂ. | ವಿವರ | ಹಳೆಯ ಶುಲ್ಕದ ವಿವರ | ಪರಿಷ್ಕರಿಸಲಾದ ಶುಲ್ಕದ ವಿವರ |
|---|---|---|---|
| 1 | ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | ರೂ.100/– | ರೂ.200/– |
| 2 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ.715/– | ರೂ.1,000/– |
| | | ಅಂಕಪಟ್ಟಿ ಶುಲ್ಕ ರೂ.185/– | ರೂ.200/– |
| | | **ಒಟ್ಟು ಶುಲ್ಕ ರೂ.900/–** | **ರೂ.1,200/–** |
| 3 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ | ರೂ.170/– | ರೂ.300/– |
| 4 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ (ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ) | ರೂ.130/– | ರೂ.250/– |
| 5 | ರಿಪಿಟರ್ಸ್ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ | ರೂ.100/– | ರೂ.150/– |

ಬಿ.ಕಾಂ (B.Com)

| ಕ್ರ.ಸಂ. | ವಿವರ | ಹಳೆಯ ಶುಲ್ಕದ ವಿವರ | ಪರಿಷ್ಕರಿಸಲಾದ ಶುಲ್ಕದ ವಿವರ |
|---|---|---|---|
| 1 | ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | ರೂ.100/– | ರೂ.200/– |
| 2 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ.615/– | ರೂ.900/– |
| | | ಅಂಕಪಟ್ಟಿ ಶುಲ್ಕ ರೂ.185/– | ರೂ.200/– |
| | | **ಒಟ್ಟು ಶುಲ್ಕ ರೂ.800/–** | **ರೂ.1,100/–** |
| 3 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ | ರೂ.170/– | ರೂ.300/– |
| 4 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ (ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ) | ರೂ.130/– | ರೂ.250/– |
| 5 | ರಿಪಿಟರ್ಸ್ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ | ರೂ.100/– | ರೂ.150/– |

**BBA, BBM, BCA & BSW**

| ಕ್ರ.ಸಂ. | ವಿವರ | ಹಳೆಯ ಶುಲ್ಕದ ವಿವರ | ಪರಿಷ್ಕರಿಸಲಾದ ಶುಲ್ಕದ ವಿವರ |
|---|---|---|---|
| 1 | ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | ರೂ.100/– | ರೂ.200/– |
| 2 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ.955/– | ರೂ.1,300/– |
| | | ಅಂಕಪಟ್ಟಿ ಶುಲ್ಕ ರೂ.1,140/– | ರೂ.1,500/– |
| | | **ಒಟ್ಟು ಶುಲ್ಕ ರೂ.800/–** | **ರೂ.1,100/–** |
| 3 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ | ರೂ.200/– | ರೂ.350/– |
| 4 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ (ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ) | ರೂ.130/– | ರೂ.250/– |
| 5 | ರಿಪಿಟರ್ಸ್ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ | ರೂ.100/– | ರೂ.150/– |

ನಿರ್ಣಯ

ವಿಶ್ವವಿದ್ಯಾನಿಲಯವು ಸ್ನಾತಕ ಮತ್ತು ಬಿ.ಇಡಿ ಪದವಿಗಳ ಈ ಮೇಲ್ಕಂಡ ಪರಿಷ್ಕೃತ ಪರೀಕ್ಷಾ ಶುಲ್ಕದ ಪ್ರಕಟಣೆ ಹೊರಡಿಸಿರುವುದನ್ನು ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(d)/(12/23) |

## -: ಟಿಪ್ಪಣಿ :-

ವಿಷಯ: ಸ್ನಾತಕೋತ್ತರ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಮುಂಬರುವ ಪರೀಕ್ಷೆಗಳಿಗೆ ಪರಿಷ್ಕರಿಸಲು ಅನುಮೋದನೆ ನೀಡುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:19.12.2023

*********

M/S;Logisys, Bangalore ಪರೀಕ್ಷಾ ತಂತ್ರಾಂಶ ಇವರೊಂದಿಗೆ ಪರಿಷ್ಕೃತ ದರದೊಂದಿಗೆ ಒಂದು ವರ್ಷದ ಅವಧಿಗೆ ಒಪ್ಪಂದ ವಿಸ್ತರಿಸಿರುವ ಹಿನ್ನಲೆಯಲ್ಲಿ ಸದರಿ ದರವು ವಿಶ್ವವಿದ್ಯಾನಿಲಯದ ಮೇಲೆ ಆರ್ಥಿಕ ಹೊರೆಯಾಗುವುದರಿಂದ ಸ್ನಾತಕೋತ್ತರ ಪದವಿಯ ಪರೀಕ್ಷಾ ಶುಲ್ಕವನ್ನು ಮುಂಬರುವ ಪರೀಕ್ಷೆಯಲ್ಲಿ ಪರಿಷ್ಕರಿಸಿ ಪ್ರಕಟಣೆಯನ್ನು ಹೊರಡಿಸಲು ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### ಸ್ನಾತಕೋತ್ತರ ಸೆಮಿಸ್ಟರ್ ಸ್ಕೀಂ ಪರೀಕ್ಷೆಗಳು

**ವೃತ್ತಿಪರ ಕೋರ್ಸ್‌ಗಳಿಗೆ (Chemistry/M.Ed./MP.Ed.)**

| ಕ್ರ.ಸಂ. | ವಿವರ | ಹಳೆಯ ಪರೀಕ್ಷಾ ಶುಲ್ಕ | ಪರಿಷ್ಕರಿಸಲಾದ ಪರೀಕ್ಷಾ ಶುಲ್ಕ |
|---|---|---|---|
| 1 | ಪರೀಕ್ಷಾ ಅರ್ಜಿಯ ಶುಲ್ಕ | ರೂ.100/- | ರೂ.200/- |
| 2 | ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ) | ರೂ.375/- | ರೂ.600/- |
| 3 | ಸೆಮಿಸ್ಟರ್ ಒಂದು ಪ್ರಾಯೋಗಿಕ ಪರೀಕ್ಷೆಗೆ | ರೂ.375/- | ರೂ.600/- |
| 4 | ಅಂಕಪಟ್ಟಿ ಶುಲ್ಕ ಪ್ರತಿ ಸೆಮಿಸ್ಟರ್‌ಗೆ | ರೂ.185/- | ರೂ.225/- |
| | ಒಟ್ಟು ಶುಲ್ಕ : | **ರೂ.1,035** | **ರೂ.1,625** |

**ವೃತ್ತಿಪರವಲ್ಲದ ಕೋರ್ಸ್‌ಗಳಿಗೆ ಮಾತ್ರ**

| ಕ್ರ.ಸಂ. | ವಿವರ | ಹಳೆಯ ಪರೀಕ್ಷಾ ಶುಲ್ಕ | ಪರಿಷ್ಕರಿಸಲಾದ ಪರೀಕ್ಷಾ ಶುಲ್ಕ |
|---|---|---|---|
| 1 | ಪರೀಕ್ಷಾ ಅರ್ಜಿಯ ಶುಲ್ಕ | ರೂ.100/- | ರೂ.200/- |
| 2 | ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ) | ರೂ.375/- | ರೂ.600/- |
| 3 | ಸೆಮಿಸ್ಟರ್ ಒಂದು ಪ್ರಾಯೋಗಿಕ ಪರೀಕ್ಷೆಗೆ | ರೂ.375/- | ರೂ.600/- |
| 4 | ಅಂಕಪಟ್ಟಿ ಶುಲ್ಕ ಪ್ರತಿ ಸೆಮಿಸ್ಟರ್‌ಗೆ | ರೂ.185/- | ರೂ.225/- |
| | ಒಟ್ಟು ಶುಲ್ಕ : | **ರೂ.1,035** | **ರೂ.1,625** |

### ನಿರ್ಣಯ

ವಿಶ್ವವಿದ್ಯಾನಿಲಯವು ಮುಂಬರುವ ಸ್ನಾತಕೋತ್ತರ ಪದವಿಗಳ ಪರೀಕ್ಷಾ ಶುಲ್ಕವನ್ನು ಈ ಮೇಲ್ಕಂಡಂತೆ ಪರಿಷ್ಕರಿಸಿ ಪ್ರಕಟಣೆಯನ್ನು ಹೊರಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(a)/(12/23) |

## –: ಟಿಪ್ಪಣಿ :–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಅತಿಥಿ ಗೃಹ(Guest House) ನಲ್ಲಿರುವ 16 ಸಂಖ್ಯೆ ಕೊಠಡಿಗಳನ್ನು ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಅತಿಥಿ ಗೃಹದ **(Guest House)** ಮೊದಲನೇ ಮಹಡಿಯಲ್ಲಿನ 16 ಸಂಖ್ಯೆ ಸಾಮಾನ್ಯ ಕೊಠಡಿಗಳನ್ನು ಸಂಶೋಧನಾ ವಿದ್ಯಾರ್ಥಿಗಳಿಗೆ ವಾಸ್ತವ್ಯಕ್ಕೆ ನೀಡಲು ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಅತಿಥಿ ಗೃಹದ **(Guest House)** ಮೊದಲನೇ ಮಹಡಿಯಲ್ಲಿನ 16 ಸಂಖ್ಯೆ ಸಾಮಾನ್ಯ ಕೊಠಡಿಗಳನ್ನು ಮಾಸಿಕ ಒಬ್ಬ ಸಂಶೋಧನಾ ವಿದ್ಯಾರ್ಥಿಗೆ ವಾಸ್ತವ್ಯಕ್ಕೆ ರೂ.1,000/–ಗಳಂತೆ ಒಂದು ವರ್ಷಕ್ಕೆ ಒಟ್ಟು ರೂ.12,000/–ಗಳನ್ನು (ವಿದ್ಯುತ್ ಶುಲ್ಕ, ನೀರಿನ ಶುಲ್ಕ ಒಳಗೊಂಡಂತೆ) ಪಾವತಿಸಿಕೊಂಡ ನಂತರ ವಾಸ್ತವ್ಯಕ್ಕೆ ಅನುಮತಿ ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(b)/(12/23) |

## -ಃ ಟಿಪ್ಪಣಿ ಃ-

ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಬ್ರಹ್ಮಪುತ್ರ ಪುರುಷ ವಸತಿ ನಿಲಯ, NSS ಘಟಕ ಮತ್ತು ಜಿಮ್ಖಾನ ಆಫೀಸ್‌ನಲ್ಲಿ ಅಲ್ಯೂಮಿನಿಯಂ ಪಾರ್ಟಿಷನ್(Aluminium partition) ಮಾಡಿಸುವ ಕುರಿತು. ಅಂದಾಜು ಮೊತ್ತ: 3.80 ಲಕ್ಷ

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಬ್ರಹ್ಮಪುತ್ರ ಪುರುಷ ವಸತಿ ನಿಲಯ, NSS ಘಟಕ, Gymkhana Office ನಲ್ಲಿ ಅಲ್ಯೂಮಿನಿಯಂ ಪಾರ್ಟಿಷನ್ (Aluminium partition) ಮಾಡಿಸುವ ಅವಶ್ಯಕತೆ ಇದ್ದು ಅದರ ಒಟ್ಟು ಅಂದಾಜು ಮೊತ್ತ ರೂ. 3.80 ಲಕ್ಷ ಆಗಿದ್ದು ಇದನ್ನು ತುಂಡುಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:29.12.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಬ್ರಹ್ಮಪುತ್ರ ಪುರುಷ ವಸತಿ ನಿಲಯ (500 ಲೀ. ಶುದ್ಧ ನೀರಿನ ಘಟಕಕ್ಕೆ) NSS ಘಟಕ (ಕೊಠಡಿ ವಿಸ್ತರಣೆಗೆ) ಹಾಗೂ Gymkhana Office ಗೆ ಅಲ್ಯೂಮಿನಿಯಂ ಪಾರ್ಟಿಷನ್‌ಗಾಗಿ (Aluminium partition) ಅಂದಾಜು ಮೊತ್ತ ರೂ.3.80 ಲಕ್ಷದೊಳಗೆ ನಿಯಮಾನುಸಾರ ತುಂಡುಗುತ್ತಿಗೆ ಆಧಾರದ ಮೇಲೆ ಕಾಮಗಾರಿ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕೊನೆಯಲ್ಲಿ ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು